ಬುಕ್ಕನ ಬೆಟ್ಟದ

ರಂಗಧಾಮನ ಚರಿತ್ರೆ

ಹಿರೀಸಾವೇ ಲಿಂಗಣ್ಣಯ್ಯಜೋಯಿಸರಿಂದ
ರಚಿಸಲ್ಪಟ್ಟಿತು.

ಮೊದಲನೇ ಛಾಪಾ 1000 ಪ್ರತಿ.

ಮೈಸೂರು:
ಶ್ರೀ ಕೃಷ್ಣಾ ಪವರ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

1933

ಕ್ರಯ 0—2—0

मन्त्रे तीर्थे, द्विजे, देवे, दैवज्ञे भेषजे गुरौ ।
याद्रुशी भावनायत्र सिद्धिर्भवति तादृशी ॥

ಎಂದರೆ—ಮಂತ್ರ, ತೀರ್ಥ, ಬ್ರಾಹ್ಮಣ, ಜೋಯಿಸ, ಔಷಧ, ಗುರು ಇವರ ಸಂಗತಿಗಳಲ್ಲಿ ಯಾವ ಅಥವ ಯಾವುದರ ಕುರಿತು ಯಾವ ತರದ ಭಾವನೆಯಾಗುತ್ತದೆಯೋ ಆ ತರದ ಸಿದ್ಧಿಯು ದೊರಕುತ್ತದೆ.

ಯಾವ ತೀರ್ಥವೇ ಆಗಲಿ, ಕ್ಷೇತ್ರವೇ ಆಗಲಿ ಅದರ ಮಹಾತ್ಮೆಯನ್ನು ಜ್ಞಾನಪೂರ್ವಕ ತಿಳಿದುಕೊಂಡು ಅದನ್ನು ಸೇವಿಸಿದ ಪಕ್ಷದಲ್ಲಿ ಆ ಯಾತ್ರಾಫಲವು ಅತಿಶಯವಾಗಿ ದೊರಕುತ್ತದೆಂಬುದು ಸರ್ವಸಮ್ಮತವಾದ ಸಂಗತಿಯಾಗಿರುತ್ತದೆ. ಈಗ ನಮ್ಮ ಮೈಸೂರು ಸಂಸ್ಥಾನದ ಹಾಸನ ಡಿಸ್ಟ್ರಿಕ್ಟಿನ ಚನ್ನರಾಯಪಟ್ಟಣದ ತಾಲ್ಲೂಕು ಹಿರೀಸಾವೆ ಹೋಬಳಿ ಬೂಕದ ಗ್ರಾಮದ ಬುಕ್ಕಾದ್ರಿ ರಂಗನಾಥ ಕ್ಷೇತ್ರವು ಪ್ರಸಿದ್ಧಿಯಾಗಿರುತ್ತದೆ ಮತ್ತು ವರ್ಷಋತು, ತುಲಾಸಂಕ್ರಮಣ, ಮಕರಸಂಕ್ರಾಂತಿ ಕಾಲಗಳಲ್ಲಿ ಅನೇಕರು ದರ್ಶನ, ಸೇವೆ ಮೊದಲಾದ್ದನ್ನು ಮಾಡಲಿಕ್ಕೆ ಹೋಗುತ್ತಾರೆ. ಪರಂತು ಅವರೆಲ್ಲರೂ ಅದರ ಮಹಾಚರಿತ್ರೆಯನ್ನು ತಿಳಿದುಕೊಂಡು, ಹಾಗೆ ಮಾಡುತ್ತಾರೆಂದು ಹೇಳಲಾಗುವುದಿಲ್ಲ. ಯಾಕೆಂದರೆ ಅದರ ಚರಿತ್ರೆಯು ಈವರಿಗೂ ಪ್ರಕಟವೂ ಆಗಲಿಲ್ಲ. ಅದನ್ನು ತಿಳಿಯಲು ಯಾರೂ ಪ್ರಯತ್ನಿಸಲೂ ಇಲ್ಲ. ಆದಕಾರಣ ಅಂಥವರ ತಿಳುವಳಿಕೆಗಾಗಿ ಬುಕ್ಕಾದ್ರಿ ರಂಗನಾಥನ ಚರಿತ್ರೆಯನ್ನು ಅಲ್ಪಜ್ಞನಾದ ನನಗೆ

ಬರೆಯಬೇಕೆಂದು ಶ್ರೀ ರಂಗನ್ನೇ ಪ್ರೇರೇಪಿಸಿದ್ದರಿಂದಲೂ ಆ ರಂಗನಾಥನ ಅಂತರಂಗ ಭಕ್ತರಾದ ನಮ್ಮ ಡಾಕ್ಟರ್ ಮೆ॥ ಶ್ರೀನಿವಾಸರಾಯರವರ ಮತ್ತು ಕೇಣಿ ಸುಬ್ಬಯ್ಯನವರ ಉತ್ತೇಜನದಿಂದಲೂ ರಂಗನಾಥನು ಇಲ್ಲಿಗೆ ದಯಮಾಡಿಸುವುದಕ್ಕೆ ಮೂಲಕಾರಣವನ್ನು ಶ್ರೀರಂಗನ ಮಹಾಮಹಿಮಾತಿಶಯವನ್ನು ಬಲ್ಲವರಾದ ವಯಸ್ಕರಾದವರಿಂದಲೂ, ಇದಕ್ಕೆ ಅನುಸರಿಸಿರುವ ಜೈಮುನಿಭಾರತ, ಬುಕ್ಕನ ಗ್ರಾಮದ ಶಾಸನ ಮತ್ತು ಸರ್ಕಾರದಲ್ಲಿರುವ ಶಾಸನದಿಂದಲೂ ತಿಳಿದಮಟ್ಟಿಗೆ ಅನೇಕ ಮಹನೀಯರ ಅವಗಾಹನೆಗೆ ತರಲು ಸಂಕಲ್ಪಿಸಿರುವೆನು. ಪ್ರಕೃತ ನಾನು ಅಲ್ಪಜ್ಞನಾದರೂ.

ಶ್ಲೋಕ || ಹೇಜಿಹ್ವೇ ರಸಸಾರಜ್ಞೇ ಸರ್ವದಾ ಮಧುರಪ್ರಿಯೆ ।
ನಾರಾಯಣಾಖ್ಯಪೀಯೂಷಂ ಪಿಬಜಿಹ್ವೇನಿರಂತರಂ ॥

ಎಂಬಂತೆ ಸರ್ವರ ನಾಲಿಗೆಯಲ್ಲಿಯೂ ರಂಗಶಬ್ದವನ್ನು ಉಚ್ಚರಿಸಲು ಅನುಕೂಲ ಹೊಂದಬೇಕೆಂದು ತೋರಿದ್ದರಿಂದ ಕನ್ನಡ ಭಾಷೆಯಲ್ಲಿ ಗದ್ಯ ಪದ್ಯ ರೂಪವಾಗಿ ಈ ಸಣ್ಣ ಪುಸ್ತಕವನ್ನು ಬರೆದಿದ್ದೇನೆ. ರಂಗನಾಥನ ಕೃಪೆಗೆ ಪಾತ್ರರಾದ ಭಕ್ತರು ಇದರಲ್ಲಿ ತಪ್ಪುಗಳಿದ್ದರೆ ಹಂಸವು ಕ್ಷೀರಪಾನಮಾಡಿ, ನೀರನ್ನು ಬೇರ್ಪಡಿಸಿ ಬಿಡುವಂತೆ ತಪ್ಪುಗಳನ್ನು ದೂರೀಕರಿಸಿ ಗುಣಗ್ರಹಣ ಮಾಡುವುದಲ್ಲದೆ ತಪ್ಪುಗಳನ್ನು ತಿಳಿಸಿದಲ್ಲಿ ಮುಂದಣ ಮುದ್ರಣಕ್ಕೆ ತಿದ್ದಿಕೊಳ್ಳುವೆನು. ಈ ಪುಸ್ತಕವನ್ನು ಸರ್ವರೂ ಪರಿಗ್ರಹಿಸಿ ಪಠಿಸಿದಲ್ಲಿ ಸಾರ್ಥಕತೆಯುಂಟಾಗುವುದೆಂದು ನಂಬಿ ಬೇಡುತ್ತೇನೆ. ನಾನು ವಿದ್ಯಾವಂತನೂ ಅಲ್ಲ. ಬುದ್ಧಿವಂತನೂ ಅಲ್ಲ. ಸಂಸ್ಕೃತದಲ್ಲಿ ಬರೆಯಲಿಲ್ಲವೆಂದು ನಿರಾಕರಿಸಲು ಪ್ರಯತ್ನಪಟ್ಟರೆ.

ಷಟ್ಪದಿ || ಭಾಸ್ಕರನ ಮಂಡಲವ ಕಂಡುನ |
ಮಸ್ಕರಿಸಿ ತೋಷಿಸದೆ ದ್ವೇಷದಿ |
ತಸ್ಕರನು ನಿಂದಿಸಲು ಕುಂದಹುದೇ ದಿವಾಕರಗೆ ||
ಸಂಸ್ಕೃತವಿದಲ್ಲೆಂದು ಕುಹಕಿತಿ |
ರಸ್ಕರಿಸಲೇ ನಹುದು ಭಕ್ತಿಪು |
ರಸ್ಸರದಿಕೇಳ್ವರಿಗೆ ಒಲಿವನು ಪುಷ್ಕರಾಕ್ಷಸದಾ ||

ಕನ್ನಡದಲ್ಲಿ ಭಗವಂತನ ಶಬ್ದವನ್ನು ಉಚ್ಚರಿಸಿದರೂ ಒಲಿವನು. ಸಂಸ್ಕೃತದಲ್ಲಿ ಬರೆದರೆ ಅದರ ತಾತ್ಪರ್ಯವನ್ನು ತಿಳಿದುಕೊಳ್ಳುವುದಕ್ಕೆ ಆ ಭಾಷೆಯ ಪರಿಚಯಸ್ಥರನ್ನು ಪ್ರತಿಯೊಬ್ಬರೂ ಹುಡುಕಿ ಅದರ ಅರ್ಥವನ್ನು ತಿಳಿದುಕೊಳ್ಳಲು ಸಾಧ್ಯವಲ್ಲದಕಾರಣ ಕನ್ನಡಭಾಷೆಯಲ್ಲಿ ಗದ್ಯ, ಪದ್ಯರೂಪವಾಗಿ ಈ ಸಣ್ಣಪುಸ್ತಕವನ್ನು ಬರೆದಿದ್ದೇನೆ. ದೈವಕೃಪೆಗೆ ಪಾತ್ರರಾದವರೆಲ್ಲರೂ ಇದನ್ನು ಪ್ರತಿದಿನವೂ ಪಾರಾಯಣಮಾಡಿ ತತ್ಸಂಬಂಧವಾದ ಪುಣ್ಯಕ್ಕೆ ನನ್ನನ್ನೂ ಭಾಗಿಯನ್ನಾಗಿ ಮಾಡಬೇಕಾಗಿ ಪ್ರಾರ್ಥನೆ. ಇದರ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಓದಿ ಇದರಲ್ಲಿರತಕ್ಕ ತಪ್ಪುಗಳನ್ನು ತಿದ್ದಿ ಪ್ರಿಂಟಿಗೆ ಸಹಾಯ ಮಾಡಿದ ನನ್ನ ತಮ್ಮ ಗಮಕಿ ಎಚ್. ರಾಮಕೃಷ್ಣಶಾಸ್ತ್ರಿಗೆ ಚಿರಋಣಿಯಾಗಿದ್ದೇನೆ.

ಗ್ರಂಥಕರ್ತ,

ಹಿರೀಸಾವೆ ಲಿಂಗಣ್ಣಯ್ಯಜೋಯಿಸ.

॥ ಶ್ರೀ ॥



ಗಣಪತಿಸ್ತುತಿ

ಅಗಜಾನನಪದ್ಮಾರ್ಕಂ । ಗಜಾನನಮಹರ್ನಿಶಂ ಅನೇಕ ದಂತಂಭಕ್ತಾನಾಂ ಏಕದಂತ ಮುಪಾಸ್ಮಹೆ ॥

ಶಾರದಾ ಸ್ತುತಿ

ನಮಸ್ತೆ ಶಾರದಾದೇವಿ । ಕಾಶ್ಮೀರಪುರವಾಸಿನೀ । ತ್ವಾಮಹಂಪ್ರಾರ್ಥಯೇದೇವೀ । ವಿದ್ಯಾದಾನಂಚ ದೇಹಿಮೆ ॥

ಗುರು ಸ್ತೋತ್ರ

ಗುರುಬ್ರಹ್ಮ ಗುರುರ್ವಿಷ್ಣು ಗುರುದೇವೋ ಮಹೇಶ್ವರಃ । ಗುರುಸ್ಸಾಕ್ಷಾತ್ಪರಬ್ರಹ್ಮತಸ್ಮೈ ಶ್ರೀ ಗುರುವೆನಮಃ ॥

ಲಕ್ಷ್ಮೀನೃಸಿಂಹ ಸ್ತೋತ್ರ

ಶ್ರೀಮತ್ಪಯೋನಿಧಿ । ನಿಕೇತನ ಚಕ್ರಪಾಣೆ ಭೋಗೀಂದ್ರ ಭೋಗ ಫಣಿರಾಜಿತಪುಣ್ಯಮೂರ್ತೆ । ಯೋಗೀಶಶಾಶ್ವತ ಶರಣ್ಯ ಭವಾಬ್ಧಿಪೋತ । ಲಕ್ಷ್ಮೀನೃಸಿಂಹಮಮದೇಹಿಕರಾವಲಂಬಂ ॥

ರಂಗನಾಥ ಶ್ಲೋಕ

ಶ್ರೀರಮಣ ಕಾರುಣ್ಯಸಾಗರ । ನಾರದಾದಿಮುನೀಂದ್ರ ವಂದಿತ । ವಾರಿಜಾಂಬಕ ವಂದ್ಯಸುರನರಭವನಸಂದೋಹ ॥ ಮಾರಪಿತಭವದೂರ ನಿಗಮ । ಶರೀರ ನಿತ್ಯಾನಂದಮೂರುತಿ । ಸಾರತರನಿಜಪದವ ಕರುಣಿಸು ರಂಗಭಕ್ತಾಂಗ ॥

ಕಮಲಮುಖ ಕಮಲಾಕ್ಷ ಮುರಹರ | ಕಮಲಕರ ಕಮಲೇಶಭವಹರ | ಕಮಲನಾಭ ಮುಕುಂದಕರುಣಿಸು ಕಮಲ ಪದಯುಗವಾ | ಮಮತೆಯಿಂದಲಿ ಧ್ಯಾನಿಪರ ಅಘ | ತಿಮಿರ ವನು ಪರಿಹರಿಸಿ ಕೃಪೆಯಿಂ | ದ ಮುಮಪಾಲಿಪ ದೈವನೀನಲೆ ರಂಗ ನಿರ್ಲಿಂಗ ||

ಸಕ್ಕರೆಯ ಸವಿದಂತೆ ಫಲವದು | ಸಿಕ್ಕುವುದು ತಾಸುಲ ಭದಿಂದಲೆ | ಮಿಕ್ಕುದನು ತಾನುಳಿದು ರಂಗನ ದಿವ್ಯಮಹಿಮೆ ಯನು || ಅಕ್ಕರದಿ ಧ್ಯಾನಿಸುವ ಮನುಜಗೆ | ಸಿಕ್ಕಲರಿಯದು ಪಾಮರಗೆಮನೆ | ಮಕ್ಕಳೊಡನಾಡುತ್ತ ರಂಗನ ಮರೆದಕತ ದಿಂದ ||

ರಂಗರಂಗಾ ಎನಲು ಮನುಜಗೆ | ಮಂಗಲವನೀಯು ವನು ನಲಿವುತ | ರಂಗಧಾಮಾಯೆನಲು ಬಾಹ್ಯದ ಅಂಗನಿರ್ಮ ಲವು | ರಂಗನಾಥಾಯೆನಲು ಮನುಜಗೆ | ಹಿಂಗುವುದು ಪಾಪಂ ಗಳೆಲ್ಲವು | ರಂಗಗುರುದೇವೆನಲು ನಿಜದಲಿ ಭಂಗಭವಜಲಧಿ ||

ರಂ ಎನಲು ಮಹತೇಜವದುವೆ | ಗಂ ಎನಲು ಗಾಢಾಂ ಧಕಾರವು | ರಂಗಯೆನಲಜ್ಞಾನ ಕತ್ತಲೆನಾಶವದರಿಂದ || ರಂಗ ನಾಮವಧರಿಸಿ ಮನುಜರ | ಕಂಗಳಿಗೆ ಕಾಣಿಸುತ ಮಹಿಮೋ | ತ್ತುಂಗನಾಗಿಯೆ ಮೆರೆವ ಬೆಟ್ಟದ ರಂಗಗುರುವರ್ಯ ||

ಬೆಟ್ಟದೊಡೆಯನೆ ನಿನ್ನ ಮಹಿಮೆಯ | ನಿಷ್ಟೆನಲು ಯನ್ನಿಂದ ಸಾಧ್ಯವೆ | ಸೃಷ್ಟಿಯನು ಪೊತ್ತಿರುವ ಶೇಷನಿಗಸದಳ ವದೆನಲು || ಮುಟ್ಟಿಭಜಿಸುವ ಶಿಷ್ಟಮನುಜರ | ಕಷ್ಟವನು ಪರಿ ಹರಿಸಲೋಸುಗ | ಇಷ್ಟನಾಗಿಯೆ ಬಂದುನೆಲಸಿದೆ ಬುಕ್ಕ ಗಿರಿಯೊಳಗೆ

ಪರಿಪರಿಯ ವಿಧದಿಂದ ಭಕ್ತರ| ದುರಿತವನು ತರಿದೊಟ್ಟೆ ಸೇವೆಯ | ನಿರುತದಿಂ ಕೈಗೊಳುತ ವರಗಳ ಕೊಟ್ಟುಮನ್ನಿಸುತ ಹರಕೆಗಳ ಮಾಳ್ಪವರ ಮನದನು | ವರಿತು ಫಲಗಳನಿತ್ತುರಕ್ಷಿಪ| ಪರಮಮಂಗಳಮೂರ್ತಿ ರಕ್ಷಿಸು ರಂಗಭವಭಂಗ ||

ಕಥಾಪ್ರಾರಂಭ

ದ್ವಾಪರಯುಗದಲ್ಲಿ ಧರ್ಮರಾಯನು ಶತ್ರುಗಳಂ ಸಂಹಾರ ಮಾಡಿ, ಬಂಧು ಹನನ ದೋಷಕ್ಕೆ ಪರಿಹಾರವನ್ನು ಬೆಸಸಬೇಕೆಂದು ತನ್ನ ಗುರುಗಳಲ್ಲಿ ವಿಜ್ಞಾಪಿಸಿಕೊಳ್ಳಲಾಗಿ, ಆ ಸದ್ಗುರುಗಳು ಶಾಸ್ತ್ರ ಪ್ರಕಾರವಾಗಿಯೂ, ಅತಿ ಮನೋಹರವಾಗಿ, ಬಿಳಿಯ ಬಣ್ಣದಿಂದ ಕೂಡಿ ಉತ್ತಮವಾದ ನಡಿಗೆಯಿಂದ ಕೂಡಿಯೂ, ಒಂದೇ ಕಿವಿಯುಳ್ಳದ್ದಾಗಿಯೂ ಇರುವ ಕುದುರೆಯಂ ಸಂಪಾದಿಸಿ ಅಶ್ವಮೇಧಯಾಗವಂ ಮಾಡೆಂದೂ, ಈ ಸುಲಕ್ಷಣಗಳಿಂ ಕೂಡಿದ ಕುದುರೆಯು ಯೌವನಾಶ್ವನ ಪಟ್ಟಣದಲ್ಲಿರುವುದೆಂದು ಅಪ್ಪಣೆಕೊಡಿಸಿದ್ದರ ಮೇಲೆ ಆಹಯವಂ ಕರಿಸಿ ಅದರ ಫಣೆಯೋಳ್ ಯಾವ ಭುಜಬಲ ಪರಾಕ್ರಮವುಳ್ಳ ವೀರನು ಕಟ್ಟುವನೋ ಅವನು ಕುದುರೆಯ ಸಂಗಡ ಬೆಂಗಾವಲಿಗೆ ಬಂದಿರುವ ಪಾರ್ಥನೊಡನೆ ಯುದ್ಧಮಾಡಬೇಕೆಂದೂ, ಹಾಗಿಲ್ಲದಿದ್ದರೆ, ಕಪ್ಪಕಾಣಿಕೆಗಳಂ ತಂದೊಪ್ಪಿಸಿ ಶರಣಾಗತನಾಗಬೇಕೆಂದು ಲಿಖಿತವಂ ಬರೆದು ಕಟ್ಟಿಬಿಡಲು ಆ ಹಯವು ಅನೇಕ ದೇಶಗಳನ್ನು ಸಂಚರಿಸಿ ವರ್ಷಋತುವಿನಲ್ಲಿ ಚಿನ್ನಬೆಳ್ಳಿಗಳಿಂದ ಕಟ್ಟಲ್ಪಟ್ಟ ಕೋಟೆಗಳೋ ಮಣಿಕೃತ ವಜ್ರವೈಡೂರ್ಯ, ಗೋಮೇಧಿಕ ಪುಷ್ಯರಾಗ ಮೊದಲಾದ ನವರತ್ನಗಳಿಂದ ಮಾಡ

ಲ್ಪಟ್ಟ ಕೋಟೆಯು ತೆನೆಗಳೋ ಉನ್ನತವಾದ ಮುತ್ತುಗಳಿಂದ ಕಟ್ಟಲ್ಪಟ್ಟ ಗೋಪುರಗಳೋ, ಹವಳಗಳಿಂದ ಕಟ್ಟಿರುವ ತೋರಣಗಳೋ ಎಂಬುವಂತೆ ಆಕಾಶವನ್ನು ಮುಟ್ಟುವ ಉಪ್ಪರಿಗೆಯ ಮನೆಗಳಿಂದಲೂ, ಕಣ್ಣು ಕೋರೈಸುವಂತಿರುವ ಅದರ ಕಾಂತಿಯಿಂದ ಚಿನ್ನದ ಗೋಡೆಗಳಿಂದಲೂ, ಮೇರುಪರ್ವತವನ್ನು ಸಹ ಮೀರಿಸತಕ್ಕ ಮನೆಯ ಗೋಪುರಗಳಿಂದಲೂ, ಸ್ತ್ರೀಯರ ಸ್ತನದ್ವಯಗಳೋ ಅಥವಾ ಉದ್ದವಾದ ತೋಳುಗಳೋ ಎಂಬಂತೆ ಇರುವ ಸೂರ್ಯ, ಚಂದ್ರವೀಧಿಗಳಿಂದಲೂ, ಸುಗಂಧದ್ರವ್ಯವೇ ಮೊದಲಾದ ಅಂಗಡಿಗಳಿಂದಲೂ, ವಿಟರ ಮನಸ್ಸನ್ನು ತಮ್ಮ ಹಾವಭಾವವಿಲಾಸಗಳಿಂದ ಮರುಳುಮಾಡುವ ವೇಶ್ಯಾಸ್ತ್ರೀಯರಿಂದಲೂ ಮತ್ತು ಹೋಮಧೂಮದಿಂದೊಡಗೂಡಿರುವ ಸದ್ಬ್ರಾಹ್ಮಣರ ಮನೆಗಳಿಂದಲೂ, ಶೋಭಾಯಮಾನವಾಗಿದ್ದ ಮಣಿಪುರದರಸನಾದ ಬಭ್ರುವಾಹನನ ಪಟ್ಟಣವಂ ಸೇರಿತು.

ಬಭ್ರುವಾಹನನು ಆ ಕುದುರೆಯ ಹಣೆಯಲ್ಲಿ ಬರೆದಿರುವ ಬಿರುದಾಂಕಿತವನ್ನು ಪರಿಕಿಸಿ ಅದಂಕಟ್ಟಿ, ತನ್ನ ತಾಯಿಯಾದ ಚಿತ್ರಾಂಗದೆಯಲ್ಲಿ ಸಮಸ್ತ ವಿಷಯವನ್ನು ಅರುಹಲಾಗಿ ಅರ್ಜುನನು ತೀರ್ಥಯಾತ್ರೆಗೋಸುಗ ಇಲ್ಲಿಗೆ ಬಂದಿದ್ದ ಕಾಲದಲ್ಲಿ ಆತನನ್ನು ತಾನು ವಿವಾಹಮಾಡಿಕೊಂಡಿದ್ದದ್ದೇ ಮೊದಲಾದವನ್ನು ಜ್ಞಾಪಿಸಿಕೊಂಡು ಅವನ ಬೀಜೋತ್ಪನ್ನನೆಂದು ಆಕೆಯು ತಿಳುಹಿದ್ದರ ಮೇಲೆ ತನ್ನ ಪೂರ್ವ ವೃತ್ತಾಂತವನ್ನು ತಿಳಿದುಕೊಂಡವನಾಗಿ ತನ್ನ ಮಂತ್ರಿಯಂ ಕರೆದು ವಿಷಯವನ್ನು ಅರುಹಿ ಆ ಸುಬುದ್ಧಿಯೆಂಬ ಮಂತ್ರಿಸಮೇತ ಯಜ್ಞಾಶ್ವ, ಕಪ್ಪಕಾಣಿಕೆಗಳು ಸಹಿತವಾಗಿ ಬಂದು ತಂದೆಗೆ ನಮಸ್ಕರಿಸಲು ಅರ್ಜುನನು ಹಿಂದಿನ ವಿಷಯವನ್ನು ಮರತವನಾಗಿಯೂ, ಹಾಗೆ ನಿಶ್ಚಯ

ದಿಂದ ಇವನು ಪುತ್ರನಾಗಿದ್ದರೂ ಕೂಡ ಕ್ಷತ್ರಿಯ ಧರ್ಮಕ್ಕೆ ವಿರೋಧವಾಗಿ ನಡೆದು ಶತ್ರುಪಾಳೆಯಕ್ಕೆ ಬಂದುದರಿಂದಲೂ ಕೋಪಿಸಿಕೊಂಡು ತಿರಸ್ಕರಿಸಲು ಆ ವೀರನು ಕಪ್ಪಕಾಣಿಕೆಗಳನ್ನು ತನ್ನ ಭಂಡಾರಕ್ಕೆ ಕಳುಹಿಸಿದವನಾಗಿ, ಈ ವಿಚಾರವಂ ತಾಯಿಗೆ ಅರಿಕೆಮಾಡಿ ಯುದ್ಧಕ್ಕೆ ತನ್ನ ಕಟ್ಟಿದೆಯಂ ಚಾಚಿವೀರ, ರಸಮಂ ತಳೆದು ಕತ್ತಿ, ಕಠಾರಿ, ಭರ್ಜಿ ಮೊದಲಾದ ಆಯುಧಗಳು ವ್ಯರ್ಥವಾಗಲು ಇಂದ್ರಾಸ್ತ್ರ, ಆಗ್ನೇಯಾಸ್ತ್ರ, ವಾಯುವ್ಯಾಸ್ತ್ರ ಗಾರುಡಾಸ್ತ್ರ ಮೊದಲಾದ ಮಹಾಮಹಾಮಂತ್ರಾಸ್ತ್ರಗಳನ್ನು ಬಿಟ್ಟರೂ ಯಾರಿಗೂ ಯಾವುದೂ ಪ್ರಯೋಜನಕ್ಕೆ ಬಾರದೆ ಹೋಗಲು ಬಭ್ರುವಾಹನನು, ಸರ್ಪಾಸ್ತ್ರವಂ ತನ್ನ ಬತ್ತಳಿಕೆ ಯಿಂದ ತೆಗೆದು ಮಂತ್ರೋಚ್ಚಾರಣ ಪೂರ್ವಕವಾಗಿ ಬಾಣ ಪ್ರಯೋಗಮಾಡಲು, ಅದು ಕರ್ಣಾರ್ಜುನರ ಸಂಗ್ರಾಮದಲ್ಲಿ ನಿನ್ನನ್ನು ಸಂಹರಿಸುತ್ತೇನೆಂದು ಶಪಥಮಾಡಿದ್ದಂತೆ ಇಂದ್ರಪುತ್ರ ನಂ ಗತಪ್ರಾಣನನ್ನಾಗಿಮಾಡಿತು

ಟಿಪ್ಪಣಿ—ಸರ್ಪಾಸ್ತ್ರ, ಕರ್ಣಾರ್ಜುನರ ಸಂಗ್ರಾಮ ಬಭ್ರುವಾಹನಿಗೂ, ಅರ್ಜುನನಿಗೂ ನಡೆದ ಯುದ್ಧ ಹೆಚ್ಚಿಗೆ (ಬರೆಯಲು ಗ್ರಂಥವಿಸ್ತರ ಭಯದಿಂದ) ಬರೆಯಲವಕಾಶವಿಲ್ಲ ವಾಗಿ ತಿಳಿಯುವುದು. (ಮಣಿಪುರ) ಈಗ ನಾಗಮಂಗಲವೆಂದು ಪ್ರಸಿದ್ಧಿಯಾಗಿರುವ ಸ್ಥಳ ಅಲ್ಲಿಯ ಕೋಟೆ, ಶಾಸನ, ಸ್ಥಳ ಪುರಾಣ ಇವುಗಳಿಂದ ಗೊತ್ತು ಮಾಡಲ್ಪಟ್ಟದೆ.

ಇತ್ತ ಹಸ್ತಿನಾಪುರದಲ್ಲಿ ಮಮಪ್ರಾಣಾಹಿಪಾಂಡವಾಃ ಎಂಬ ಬಿರುದನ್ನು ಧರಿಸಿರುವ ಸರ್ವಾಂತರ್ಯಾಮಿಯಾದ ಪರ ಮಾತ್ಮನು, ಕುಂತೀ, ಧರ್ಮರಾಯ, ಭೀಮ, ನಕುಲ, ಸಹ ದೇವ, ದ್ರೌಪದಿ ಇವರುಗಳೊಡನೆ ಇದ್ದು, ಇದನ್ನು ಅರಿತವ

ನಾಗಿ ಅರ್ಜುನನಂ ಸಜೀವನನ್ನಾಗಿ ಮಾಡಲುದ್ಯುಕ್ತನಾಗಿ ತನ್ನ ಬಿರುದಾಂಕಿತವಾದ ಶಂಖಚಕ್ರಗಳನ್ನು ಧರಿಸಿ ಪ್ರಯಾಣವಾಡು ವಂಥಾವನಾಗಿ ವರ್ಷಋತುವಿನಲ್ಲಿ ಈ ಬುಕ್ಕಾದ್ರಿಯಲ್ಲಿ ತಪಸ್ಸು ಮಾಡುತ್ತಿದ್ದ ಮತೀಶ್ವರ ಮುನಿಗೆ ದರ್ಶನವನ್ನು ಕೊಟ್ಟು, ತನ್ನ ಜ್ಞಾಪಕಾರ್ಥವಾಗಿಯೂ, ಆ ಋಷಿಯು ಇಚ್ಛಾಪ್ರಕಾರ ವಾಗಿಯೂ ತನ್ನ ಪಾದವನ್ನು ಶಿಲೆಯಲ್ಲಿ ಒತ್ತಿ ಧರ್ಮರಾಯು ಸಹಿತವಾಗಿ ಮಣಿಪುರಕ್ಕೆ ಪ್ರಯಾಣಬೆಳೆಸಿದನು. ಆ ಕಾಲ ದಲ್ಲಿಯೇ ಪರಮಾತ್ಮನ ಪಾದವು ಇಲ್ಲಿ ನೆಲಸುವಂಥಾದ್ದಾಯಿತು ಬುಕ್ಕರಾಜನು ಇಲ್ಲಿಗೆ ಬರುವ ಪರ್ಯಂತರವೂ ಈ ಪಾದಗಳಿಗೆ ಅರ್ಚನೆಯು ನಡೆಯುತ್ತಲಿದ್ದಿತು.

ಟಿಪ್ಪಣಿ:—ಪರಮಾತ್ಮನು ಇಲ್ಲಿಗೆ ರಣರಂಗಕಾಲದಲ್ಲಿ ದಯಮಾಡಿಸಿದ ಕಾರಣ, ರಂಗನಾಥ ನಾಮವಂಧರಿಸಿರುತ್ತಾನೆ. ಅರ್ಜುನನಂ ಸಜೀವನನ್ನಾಗಿ ಮಾಡಿದ ವಿಚಾರ ಇಲ್ಲಿ ಬರೆಯಲು ಗ್ರಂಥ ವಿಸ್ತರ ಭಯದಿಂದ ನಿಲ್ಲಿಸಬೇಕಾಯಿತು ಪರಮಾತ್ಮನು ಇಲ್ಲಿ ಶಯನವಂ ಮಾಡಿದರೆ ಕಾಲಾತೀತವಾಗುವುದೆಂದು ಮನ ಸ್ಸಿಗೆ ತೋರಿರಬಹುದಾದ ಕಾರಣ ಮಲಗಲಿಲ್ಲವೆಂದು ತಿಳಿಯು ವುದು.

ಪರಮಾತ್ಮನು ರಂಗನಾಥನಾಮವಂಧರಿಸಿ ಇಲ್ಲಿ ನಿಂತಿದ್ದ ನಾದ ಕಾರಣ ಇಲ್ಲಿರತಕ್ಕ ಶಂಖ, ಚಕ್ರಾಕಾರವಾಗಿರುವ ಈ ತೀರ್ಥಗಳಿಗೆ ಶಂಖ, ಚಕ್ರವೆಂದು ಅಭಿದಾನವಾಯಿತು

ಷಟ್ಪದಿ

ಹರಿಯು ಕರದಲಿ ಮೆರೆವನಿನ್ನಯ | ಬಿರಿದಪೆಸರಿನ ಕೊಳ ಗಳಿರಢರ | ಪರಮತೀರ್ಥದಿ ಮಿಂದಮನುಜರ ಕಷ್ಟ ವೊದ ಲಾದ || ದುರಿತ ವ್ಯಾಧಿಗಳೆಲ್ಲ ಕಾಣದ | ತೆರದಿಪೋಪುದು ತೀರ್ಥ

ಮಹಿಮೆಯ | ಪರಿಯ ಪೊಗಳಲಶಕ್ಯ ಯನ್ನಳಪಲ್ಲವದು ತಾನೆ ||
ರಾಶಿಯೇಳಕೆ ರವಿಯು ಬಂದಾ | ಭಾಸುರದಹರಿ ಪದದ ದಿನ
ದೊಳು | ತಾಸುವಿಳಕೆ ಸೂಸುವುದು ತೀರ್ಥವದು ಮೇಲ್ಗಡೆಗೆ ||
ಈ ಸುದಿನದಲಿ ಭೂಸುರರು ಬಂ | ದೀಕ್ಷಿಸುತ ಗಂಗೆಯನು
ಬಹು ಸಂತೋಷದಲಿ ಪೂಜೆಯನು ಮಾಡಿಯೆ ಮಿಂದು ಮಡಿ
ಯುಟ್ಟು ||

ನಿತ್ಯಕರ್ಮವನಾಚರಿಸಿಪುರು | ಷೋತ್ತಮನಬಳಿಗೈದಿನಿಗ
ಮ | ಸ್ತುತ್ಯನಿಗೆ ಶ್ರುತಿಸೂಕ್ತಿಯಿಂದಭಿಷೇಕವನುಮಾಡಿ ||
ಉತ್ತಮಾಂಗಕೆ ವಸ್ತ್ರವನು ಬಿಗಿ| ದೊತ್ತಿಕಟ್ಟಿಯೆಬಳಿಕಘನೆ
ಯೊಳ | ಗರ್ಥಿಯಲಿಧರಿಸುವರು ಹರಿಮುಯವೆತ್ತಲಾಂಛನವ ||

ಜಾಜಿಮಲ್ಲಿಗೆತುಳಸಿಚಂಪಕ | ಮಾಜದಿಹಕರ ವೀರಯೂ
ಥಕ | ಭ್ರಾಜಮಾನಸುಗಂಧಿ ಮೊದಲಹ ರಾಜಕುಸುಮಗಳ ||
ಮೂಜಗವರಕ್ಷಿಸುವದೇವನ | ರಾಜಿಪಾಂಗಕೆ ಧರಿಸಿನೋಡುವ |
ರೀಜಗದೊಳವರೇನು ಧನ್ಯರೋ ದೇವತಾಬಲ್ಲ ||

ಭೂಮಿಯಳದ ಮಹಾತ್ಮನಡಿಗಳ | ನಾಮಶತಸಾಸಿರ
ಗಳಿಂದಲಿ | ನೇಮವರಿದರ್ಚಿಸುತಭಕ್ತಸ್ತೋಮ ನೆರೆಗೂಡಿ ||
ಹೋಮಿಸಿದರಸಧೂಪಗುಗ್ಗುಳ | ಧೂಮಧೂಸರ ಮುಸುಕಲ
ಭ್ರವ | ತಾಮರಸಲೋಚನನು ತಳೆದನು ಶ್ಯಾಮಲಾಕೃತಿಯ ||

ಷಡುರಸಾನ್ನವು ಭಕ್ಷಪಾಯಸ| ನಿಡುತರದ ಪರಡಿಗೆಯು
ಶರ್ಕರ | ಧೃಡತರದ ಶಾಲ್ಯಾನ್ನಸೂಪವು ಶಾಕಪಾಕಗಳ|| ವಡೆಪ
ತೆಂಗಿನಕಾಯಿಯೆಡಗಡೆ | ಗಿಡುವ ಕದಲೀಫಲಗಳೆಲ್ಲವ | ಸಡ
ಗರದಿನೇವೇದ್ಯಮಾಡಿಯೆ ಕಡಲಶಯನಂಗೆ ||

ರಂಗನಿಗೆ ತಾಂಬೂಲವರ್ಪಿಸಿ | ಮಂಗಳಂಗಳ ಪಾಡೆ ಸತಿ
ಯರು | ಮಂಗಳದವಾದ್ಯಗಳು ಮೊರೆಯುತ್ತಿರಲುಸಂಭ್ರಮದಿ||

ಅಂಘವಿಸಿ ವಿಪ್ರರುಗಳೆಲ್ಲಕ | ರಂಗಳನು ಜೋಡಿಸಿಯೆ ವರವೇ | ದಾಂಗದಿಂದೆತ್ತುವರು ರಂಗಗೆ ಮಂಗಳಾರತಿಯ ||

ಅಕ್ಷಯಾತ್ಮನೆ ರಕ್ಷಿಸೆಂದುಪ್ರ | ದಕ್ಷಿಣೆಯನೆಸಗುತ್ತ ದೇವನ | ಲಕ್ಷಣವ ವರ್ಣಿಸುತಲಾಕ್ಷಣ ಅಡ್ಡಬೀಳುತ್ತ || ಪಕ್ಷಿ ವಾಹನನೀನು ಕರುಣಕ || ಟಾಕ್ಷದಿಂದೀಕ್ಷಿಸುತ ಲೆಮ್ಮಯ | ದುಷ್ಟಲಕ್ಷಣಗಳನು ಮನ್ನಿಸಿ ರಕ್ಷಿಸೆನುತಿಹರು ||

ಮಾರಮಣನರ್ಚನೆಯ ನೀಪರಿ | ಪೂರಯಿಸಿಬಳಿಕೆಲ್ಲ ಮನುಜರು | ಸಾರತರತೀರ್ಥ ಪ್ರಸಾದವನಲ್ಲಿ ಸ್ವೀಕರಿಸಿ || ಭೂರಿಭೋಜನ ಗಂಧ ಪುಷ್ಪಾ | ಹಾರ ತಾಂಬೂಲವನು ಸವಿದುವಿ| ಹಾರ ಮುಖದಲಿ ತೆರಳುತಿರ್ಪರು ತಮ್ಮ ಗೃಹಗಳಿಗೆ ||

ಈ ರೀತಿಯಾಗಿ ತುಲಾ ಸಂಕ್ರಮಣದ ದಿವಸ ಪುಣ್ಯ ಕಾಲಕ್ಕೆ ಸರಿಯಾಗಿ ಪರಮಪಾವನೆ. ಮೋಕ್ಷದಾಯಕಿ, ಜಗನ್ಮಾತೆಯಾದ ಕಾಶಿಯ ಗಂಗೆಯು ಬರುವಂತೆ ಅನುಗ್ರಹವಂ ಮಾಡಿರುವನಾದ ಕಾರಣ ಆ ದಿನ ಸ್ನಾನ ಮಾಡಿದರೆ ಗಂಗಾಸ್ನಾನ ಮಾಡಿದ ಫಲವು ಬರುವುದು. ಆ ದಿವಸ ಈ ಶಂಖ, ಚಕ್ರ ತೀರ್ಥಗಳಲ್ಲಿ ಮಿಂದು, ತನ್ನ ಪಿತೃ ದೇವತೆಗಳಿಗೆ ಯಾವನು ತಿಲೋದಕವನ್ನು ಕೊಡುವನೋ ಅವನ ಪಿತೃಗಳು ಸ್ವರ್ಗ ಸುಖವನ್ನು ಹೊಂದುವರು ಮತ್ತು ಗಯಾಶ್ರಾದ್ಧ ಫಲವು ಲಭಿಸುವುದು. ಈದಿನ ಯಾವನು ತನ್ನ ದರ್ಶನವನ್ನೂ, ತೀರ್ಥಸ್ನಾನವನ್ನೂ ಸಹ ಮಾಡುವನೋ ಅವನ ಕಷ್ಟಗಳು ಸಹ ಪರಿಹಾರವಾಗಲೆಂದು ಭಗವಂತನು ವಚನವಿತ್ತವನಾಗಿ ಮಣಿಪುರವಂ ಕುರಿತು ಪ್ರಯಾಣವನ್ನು ಮಾಡುವಂಥಾವನಾದನು.

ಆ ಕಾಲದಲ್ಲಿ ಬುಕ್ಕಾದ್ರಿಯು ವಿಜನವಾಗಿಯೂ, ಹುಲಿ, ಕಿರುಬ, ಕಾಡುಕೋಣ, ಸರ್ಪ, ತೋಳ, ಚಿರತೆ ಮೊದಲಾದ

ಮೃಗಗಳಿಂದಲೂ ಮಹನೀಯರಿಗೆ ನಮಸ್ಕಾರಮಾಡುತ್ತಿರುವುವೋ ಎಂಬಂತೆ ಫಲಭರಿತವಾಗಿ ಬಗ್ಗಿರುವ, ಬಾಳೆಯಗೊನೆಗಳಿಂದಲೂ, ಮಾರ್ಗದಲ್ಲಿ ಆಯಾಸಪಟ್ಟು ದಣುವಾರಿಸಿಕೊಳ್ಳುವ ಜನರಿಗಾಗಿಯೇ ನಮ್ಮನ್ನು ಪರಮಾತ್ಮನು ಸೃಷ್ಟಿಮಾಡಿರುತ್ತಾನೆಂದು ತಿಳಿಸುವಹಾಗೆ ವಿಶಾಲವಾದ ನೆರಳುಗಳಿಂದ ಕೂಡಿರುವ ಆಲದ ಮರಗಳಿಂದಲೂ, ಮಾರ್ಗಸ್ಥರ ಕ್ಷುದ್ಬಾಧೆಯನ್ನು ಪರಿಹರಿಸುತ್ತೇವೆಂದು ತೋರಿಸುತ್ತಿರುವ ಮಾವು, ಹಲಸು, ತೆಂಗು, ಸೀಬೆ, ದಾಡಿಮ ಮೊದಲಾದ ಫಲಭರಿತವಾದ ಸದ್ವೃಕ್ಷಗಳಿಂದಲೂ ಮನಸ್ಸಿಗೆ ಆನಂದವನ್ನುಂಟುಮಾಡುವ ಶುಕ, ಪಿಕ ಮೊದಲಾದ ಪಕ್ಷಿಗಳ ಇಂಪಾದ ಗಾನದಿಂದಲೂ ಮಹನೀಯರ ತಪಸ್ಸಿಗೆ ಯೋಗ್ಯವಾಗಿಯೂ ಇದ್ದಿತು. ಹೇಗೆಂದರೆ ನಮ್ಮಗಳ ಬಾಲ್ಯದಲ್ಲಿ ಈ ಬೆಟ್ಟದ ಮೇಲೂ, ಸುತ್ತಲೂ ಬಹಳವಾಗಿ ಮರಗಳಿದ್ದು ಕಾಲಕ್ರಮಗತಿಯಿಂದ ನಶಿಸಿಹೋಗಿ ಈಗ ವಿಶಾಲವಾದ ಮೈದಾನವಾಗಿದೆಯೆಂದು ನಮ್ಮ ಪೂರ್ವಿಕರು ಹೇಳುತ್ತಿದ್ದರಲ್ಲದೆ ನಮ್ಮ ಚಿಕ್ಕಂದಿನಲ್ಲಿದ್ದ ಮರಗಳೂ ಈಗಿಲ್ಲವಾಗಿರುವುದು ದೃಷ್ಟಾಂತವಾಗಿದೆ. ಇಲ್ಲಿ ಮತೀಶಮುನಿಗಳು ತಪಸ್ಸು ಮಾಡುತ್ತಿದ್ದ ಸ್ಥಳವೆಂದು ಧಾರಾಳವಾಗಿ ಹೇಳಬಹುದು. ಯಾಕೆಂದರೆ ಇದಕ್ಕೆ ಆಧಾರವಾಗಿ ಬೆಟ್ಟದ ಉತ್ತರ ದಿಕ್ಕಿನಲ್ಲಿರುವ ಒಂದು ಕಲ್ಲಿಗೆ ಕರಡಿ ಕಲ್ಲೆಂದು ಹೇಳುತ್ತಾರೆ. ಅಲ್ಲಿ ಹಿಂದೆ ಮತೀಶಮುನಿಯು ತಪಸ್ಸು ಮಾಡುತ್ತಿದ್ದ ಸಣ್ಣ ಕಲ್ಲಿನ ಗವಿಯೊಂದಿದೆ. ಈಚೆಗೆ ಈ ಕಲ್ಲಿನ ಸಂದಿನಲ್ಲಿ ಕರಡಿಯು ಅಡಗಿಕೊಂಡಿತ್ತಾದ ಕಾರಣ ಈ ಹೆಸರು ಬಂದಿತು.

ಯಾವ ಮನುಷ್ಯನಾದರೂ ಬೆಟ್ಟದ ಮೇಲ್ಭಾಗಕ್ಕೆ ಹೋದರೆ, ಮನಸ್ಸಿಗೆ ಒಂದು ವಿಧವಾದ ಭಕ್ತಿಯೂ, ಆನಂದವೂ

ಉಂಟಾಗಿ ಸ್ಥಳ ಪಲ್ಲಟನ ಮಾಡಬೇಕೆಂಬ ಬುದ್ಧಿಯು ತೋರುವುದೇ ಇಲ್ಲವಾದ ಕಾರಣ ಈ ಮಹಾತ್ಮರು ತಪಸ್ಸು ಮಾಡುತ್ತಿದ್ದರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಪರಮಾತ್ಮನು ವರ್ಷ ಋತುವಿನಲ್ಲಿಯೇ ಇಲ್ಲಿಗೆ ಬಂದಿದ್ದನೆಂದು ಹೇಳಲು ಮುಖ್ಯವಾದ ಕಾರಣವೊಂದುಂಟು.

ವೃಷ್ಟಿಭಂಗವದಾಗಿಸಸಿಗಳು | ನಷ್ಟವಾಗುತ್ತಿರಲು ಜನರಿಗೆ | ಕಷ್ಟವದು ಬಂದೊದಗೆರಂಗಗೆ ಕಟ್ಟೆ ಹರಕೆಯನು || ಅಷ್ಟಗ್ರಾಮದ ಜನರು ಪರಿಕರ | ವಷ್ಟುಸೇರಿಸಿಹರಿಯ ಸೇವೆಯ | ದಷ್ಟವಿಸಿ ಮಾಡುವರು ಭಕ್ತಿಯನಿಟ್ಟು ಹರುಷದಲಿ ||

ಬಹುಕಾಲದಿಂದಲೂ ವರ್ಷ ಋತುವಿನಲ್ಲಿ ಮಳೆಯು ನಿಂತುಹೋದರೆ ಅನಾವೃಷ್ಟಿದೋಷ ಪರಿಹಾರಕ್ಕಾಗಿ ಈ ಸುತ್ತಲಿರುವ ಗ್ರಾಮದ ಜನಗಳೆಲ್ಲರೂ ಸೇರಿ ಪರಮಾತ್ಮನಿಗೆ ಅಭಿಷೇಕ ಮಹಾ ನೇವೇದ್ಯ, ಮಂಗಳಾರತಿಯೂ ನಡೆಸಿದಲ್ಲಿ ಬ್ರಾಹ್ಮಣ ಭೋಜನ ಸಮಯಕ್ಕಾಗಲಿ, ಭೋಜನಾನಂತರವಾಗಲಿ ಅಥವಾ ಸಂಧ್ಯಾಕಾಲಕ್ಕೆಯಾಗಲಿ ಮಳೆಯು ಈಗಲೂ ಬಂದೇ ಬರುತ್ತದೆಯಾದಕಾರಣ ಪರಮಾತ್ಮನು ವರ್ಷಋತುವಿನಲ್ಲಿ ಇಲ್ಲಿಗೆ ದಯಮಾಡಿಸಿದ್ದನೆಂದೂ, ವರ್ಷದಾಯಕನೆಂದೂ ನಿಸ್ಸಂದೇಹವಾಗಿ ಹೇಳಬಹುದು.

ಬುಕ್ಕಗಿರಿಯೆಂದು ಹೆಸರು ಬರಲು ಕಾರಣ

ಈಗ್ಯೆ ಸುಮಾರು ಶಾಲೀವಾಹನಶಕ ೧೩೦೦ ವರ್ಷಗಳ ಹಿಂದೆ ಶ್ರೀ ಶೃಂಗೇರಿ ಜಗದ್ಗುರುಗಳವರ ಪರಂಪರೆಯಿಂದ ಬಂದ ವಿದ್ಯಾರಣ್ಯಸ್ವಾಮಿಗಳವರು ತುಂಗಭದ್ರಾ ತೀರದಲ್ಲಿ ಒಂದು ವಿದ್ಯಾನಗರವಂ ಕಟ್ಟಿಸಿ ಹುಕ್ಕ, ಬುಕ್ಕರೆಂಬ ಅಣ್ಣತಮ್ಮಂದಿರಿರಲು ಹಿರಿಯವನಾದ ಹುಕ್ಕ [illegible] ತಪಸ್ಸಂ ಮಾಡುತ್ತಿದ್ದರು.

ಈ ಬುಕ್ಕನು ರಾಜ್ಯವಂ ವಿಸ್ತರಿಸಬೇಕೆಂಬ ಅಭಿಲಾಷೆ ಯಿಂದ ಅಣ್ಣನ ಅಪ್ಪಣೆಯುಂ ಪಡೆದು ಸೈನ್ಯ ಸಮೇತನಾಗಿ ಇದೇ ತಾಲ್ಲೂಕಿನಲ್ಲಿ ರಾಜಾಪುರವೆಂದು ಹೇಳುವ ಗ್ರಾಮಕ್ಕೆ ಬರುವ ಕಾಲದಲ್ಲಿ ಸಾಯಂಕಾಲವಾಗಲು ಅಲ್ಲಿ ನಿಂತು ಆ ರಾತ್ರೆ ಆ ಗ್ರಾಮದಲ್ಲಿ ಮಲಗಿಕೊಳ್ಳಲು ಬುಕ್ಕರಾಜನ ಸ್ವಪ್ನದಲ್ಲಿ ಪರಮಾ ತ್ಮನು ರಂಗನಾಥನಾಮವಂ ಧರಿಸಿ ಸಮೀಪದ ಬೆಟ್ಟದಲ್ಲಿ ನೆಲಸಿರು ವುದಾಗಿಯೂ, ಇಲ್ಲಿ ನಿದರ್ಶನವಾಗಿ ತನ್ನ ಪಾದವಿರುವುದಾಗಿಯೂ ತನ್ನ ಮೂರ್ತಿಯನ್ನು ಇಲ್ಲಿ ನಿರ್ಮಾಣಮಾಡಬೇಕೆಂದು ಅಪ್ಪಣೆ ಯಾದದ್ದರಮೇಲೆ ತಮ್ಮ ಗುರುಗಳಾದ ವಿದ್ಯಾರಣ್ಯಸ್ವಾಮಿಗಳಂ ಕರೆಸಿ ತನ್ನ ಸ್ವಪ್ನ ವೃಂತ್ತಾಂತವನ್ನು ಅರುಹಲಾಗಿ ಆ ವಿದ್ಯಾ ರಣ್ಯಸ್ವಾಮಿಗಳವರು ಬುಕ್ಕರಾಯುಸಮೇತವಾಗಿ ಬಂದು. ಈಗಿ ರುವ ಮೂರ್ತಿಗೆ ಶಂಖ, ಚಕ್ರಗದಾಧರನೆಂದುಹೆಸರಿಟ್ಟು ಪ್ರತಿಷ್ಠೆ ಮಾಡುವವರಾದರು. ಇದಕ್ಕೆ ಅನುಸರಿಸಿ ಬುಕ್ಕರಾಜನಪ್ರಥಿ ಮೆಯು ದೇವಸ್ಥಾನದಲ್ಲಿ ಗೋಡೆಗೆ ನಿಲ್ಲಿಸಿರುವ ಕಲ್ಲಿನಲ್ಲಿ ಕೆತ್ತಲ್ಪ ಟ್ಟಿರುತ್ತದೆ. ಈಗಲೂ ಪೂರ್ವೀಕರು ಅದನ್ನು ಕೇಳಿದರೆ ಬುಕ್ಕ ರಾಜನ ಪ್ರಥಿಮೆಯೆಂದು ಹೇಳುತ್ತಾರೆ.

ಟಿಪ್ಪಣಿ-ಈಗ ಬೂಕ ಎಂದು ವಾಡಿಕೆಯಲ್ಲಿರುವ ಗ್ರಾಮ ವನ್ನು ಆತನೇ ಕಟ್ಟಿಸಿದ್ದನೆಂದು ಹೇಳುತ್ತಾರೆ. ಇದಕ್ಕೆ ಆಧಾರ ವಾಗಿ ಈ ಗ್ರಾಮದಲ್ಲಿ ಈಗ ರಂಗಸ್ಥಳವೆಂದು ಹೇಳುವ ಸ್ಥಳದಲ್ಲಿ ಒಂದು ಶಾಸನದ ಕಲ್ಲಿನಲ್ಲಿ "ಬುಕ್ಕಾದ್ರಿ ರಂಗನಿಗಾಗಿ" ಎಂಬ ದಾಗಿ ಬರೆದು ಬಾಕಿ ವಿಚಾರವನ್ನು ತಿಳಿಯಲು ಅವಕಾಶವಿಲ್ಲದೆ ಇರುವ ಶಿಲೆಯಲ್ಲಿ ಶಾಸನವಿದೆ. ಮತ್ತು ಮಲ್ಲೇಶ್ವರ ದೇವಸ್ಥಾ ನದ ಬಳಿಯಲ್ಲಿ "ಯಾನಂಗೆಜಪುರದಹಯದ" ಎಂಬದಾಗಿ ಶಿಲಾ ಶಾಸನವು ಬಹಳವಾಗಿ ಈಗಿನ ಗೋಪಾಲಕರಿಂದ ನಾಶ

ಮಾಡಲ್ಪಟ್ಟು ಇಷ್ಟು ಮಾತ್ರ ಕಾಣಲ್ಪಡುತ್ತದೆ ಮತ್ತು ಬುಕ್ಕರಂಗೆ ಎಂದಿದೆ ಬಾಕಿ ವಿಚಾರ ಕೆಲವು ಅಕ್ಷರಗಳು ಕಂಡು ಕೆಲವು ಕಾಣುವುದಿಲ್ಲವಾದಕಾರಣ ಶಾಸನದ ವಿಚಾರ ಬರೆಯಲು ಅವಕಾಶವಿಲ್ಲ. ಕೋಟೆ ಕಂದಕಗಳು ನಶಿಸಿಹೋಗಿರುತ್ತವೆ. ಹೆಗ್ಗಡಿಹಳ್ಳಿ, ಚಿಕ್ಕೇನಹಳ್ಳಿ, ಹೊನ್ನಿನಹಳ್ಳಿಯೂ ಅಂದರೆ ಈಗೆ ಹೊನ್ನೇನಹಳ್ಳಿಯೆಂದು ಕರೆಯುವ ಗ್ರಾಮವು ಈ ದೇವರ ಉತ್ಪತ್ತಿಗಾಗಿಯೂ ಹೆಚ್ಚಾದ ಅನುಕೂಲವು ಇರುವಂತೆಯೂ ಬುಕ್ಕರಾಜನ ಕಾಲದಿಂದ ಕೆಲವು ಜಮೀನನ್ನು ಇನಾಮತಿ ಬಿಟ್ಟಿರುತ್ತಾರೆ. ಈ ಮುಖ್ಯ ನಾಲ್ಕು ಗ್ರಾಮಗಳ ಭಕ್ತಾದಿಗಳು ಪ್ರತಿಯೊಬ್ಬರೂ ದೈವಭಕ್ತರಾಗಿ ಸಮಸ್ತ ದೇವತಾಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಸಿಕೊಂಡು ದೇವತಾಸೇವೆಗಾಗಿ ತಗಲುವ ಖರ್ಚುಗಳನ್ನು ವಹಿಸಿಕೊಂಡು ಸೇವೆಮಾಡುತ್ತಾ ಬರುತ್ತಿದ್ದಾರೆ. ಈ ಗ್ರಾಮಗಳಲ್ಲದೆ ಮತಿಘಟ್ಟ, ಸೋರೇಕಾಯಿಪುರ, ಬುಕ್ಕನಬೆಟ್ಟ, ಹಿರೀಸಾವೆ, ಅರಕೆರೆ, ಸಬ್ಬನಹಳ್ಳಿ ಈ ಗ್ರಾಮಗಳಲ್ಲಿಯೂ ದೇವರಿಗೆ ಇನಾಮತಿಗಳನ್ನು ಬುಕ್ಕರಾಜನ ಕಾಲದಲ್ಲಿ ಕೊಡಲ್ಪಟ್ಟವೆಂದು ಹೇಳುತ್ತಾರೆ. ಗ್ರಾಮಗಳ ವರ್ಣನೆಯನ್ನು ವಿಶದೀಕರಿಸಲು ಗ್ರಂಥವಿಸ್ತರ ಭಯದಿಂದಲೂ, ಪರಮಾತ್ಮನ ನಾಮೋಚ್ಚಾರಣೆಮಾಡಲು ತೊಂದರೆಯಾಗುವುದೆಂದು ಗ್ರಂಥಕರ್ತನು ನಿಲ್ಲಿಸಬೇಕಾಯಿತು.

ಪರಮಾತ್ಮನು ಯಾವಯಾವ ಅವಯವಗಳಲ್ಲಿ ಯಾವಯಾವ ನಾಮವಂ ಹೊಂದಿರುವನೆಂದರೆ—.

೧. ಶಿಖೆಯಲ್ಲಿ-ಕೇಶವನಾಮವನ್ನು ಹೊಂದಿಯು, ೨. ಮೂರ್ಧ್ನಿಯಲ್ಲಿ-ನಾರಾಯಣ, ೩. ಲಲಾಟದಲ್ಲಿ-ಮಾಧವ, ೪. ನೇತ್ರದಲ್ಲಿ ಗೋವಿಂದ, ೫. ಕರ್ಣದಲ್ಲಿ-ವಿಷ್ಣು, ೬ ಘ್ರಾಣದಲ್ಲಿ-ಮಧು

ಸೂದನ ೭. ಮುಖದಲ್ಲಿ-ತ್ರಿವಿಕ್ರಮ ೮. ಕಂಠದಲ್ಲಿ-ವಾಮನ ೯. ಬಾಹುವಿನಲ್ಲಿ-ಶ್ರೀಧರ ೧೦. ಉಪಬಾಹುವಿನಲ್ಲಿ-ಹೃಷೀಕೇಶ ೧೧. ಹಸ್ತದಲ್ಲಿ-ಪದ್ಮನಾಭ ೧೨. ಹಸ್ತಾಂಗುಳಿಯಲ್ಲಿ-ದಾಮೋದರ ೧೩. ಹೃದಯದಲ್ಲಿ-ಸಂಕರ್ಷಣ ೧೪. ಪೃಷ್ಠದಲ್ಲಿ-ವಾಸುದೇವ ೧೫. ನಾಭಿಯಲ್ಲಿ-ಪ್ರದ್ಯುಮ್ನ ೧೬ ಕಟಿಯಲ್ಲಿ-ಅನಿರುದ್ಧ ೧೭. ಗುಹ್ಯದಲ್ಲಿ-ಪುರುಷೋತ್ತಮ ೧೮, ಅಪಾನದಲ್ಲಿ-ಅಧೋಕ್ಷಜ ೧೯. ಊರುವಿನಲ್ಲಿ-ನಾರಸಿಂಹ ೨೦ ಜಾನುವಿನಲ್ಲಿ-ಅಚ್ಯುತ ೨೧. ಜಂಘದಲ್ಲಿ ಜನಾರ್ದನ ೨೨. ಗುಲ್ಫದಲ್ಲಿ-ಉಪೇಂದ್ರ ೨೩. ಪಾದದಲ್ಲಿ-ಹರಿ ೨೪. ಪಾದಾಂಗುಳಿಯಲ್ಲಿ-ಶ್ರೀಕೃಷ್ಣ ಈ ರೀತಿಯಾಗಿ ಅವಯವಗಳಲ್ಲಿ ಪುರುಷರಿಗೆ ಪುರುಷೋತ್ತಮನಾಗಿಯೂ, ಸ್ತ್ರೀಯರಿಗೆ ಲಕ್ಷ್ಮಿ, ಪಾರ್ವತಿ, ಭಾರತಿ, ಸೌವರ್ಣಿ ಮೊದಲಾದವರು ಅಭಿಮಾನಿಗಳಾಗಿದ್ದು ರಕ್ತವರ್ಣ, ಶ್ರೀಸಂಕರ್ಷಣ, ಪ್ರದ್ಯುಮ್ನರೂಪಗಳಿಂದಲೂ (ಅಂದರೆ) ಸ್ತ್ರೀ ಪುರುಷರಿಬ್ಬರಿಂದಲೂ ಗುಣ ಕಥನ ಮಾಡಿಸಿಕೊಳ್ಳಲು ಸೇವೆಗೊಳ್ಳಲೂ ಮಹನೀಯನಾದ ರಂಗನಾಥನು ಈ ಬುಕ್ಕಾದ್ರಿಯಲ್ಲಿ ನೆಲಸಿರುವನು.

ಈ ಮಹಾತ್ಮನ ಗುಣ ಕಥನವನ್ನು ಕೊಂಚ ಪೇಳುತ್ತೇನೆ. ಮಣಿಗಳಿಗೆ ಆಧಾರವಾಗಿರುವ ಸೂತ್ರದ ಹಾಗೆ ಓಂಕಾರ ಪ್ರತಿಪಾದ್ಯನು, ಪೂರ್ಣ ಸುಖನು, ಬಹು ಕರುಣಾನಿಧಿಯು ಸಮುದ್ರದಲ್ಲಿ ಹಡಗಿನ ಮಾರ್ಗವು ತಿಳಿಯದ ಹಾಗೆ ಕಮಲನಾಭನ ಗುಣ ರೂಪಗಳನ್ನು ಕೊನೆಗಾಣಿಸದೆ ಇರುವುದರಿಂದ ಲಕ್ಷ್ಮಿಗೂ ಸಹ ತಿಳಿಯಲಶಕ್ಯವಾದ ಪರಮಾತ್ಮನು ಅದ್ವಿತೀಯನು, ಅಪ್ರಮೇಯನು, ವೇದೋದ್ಧಾರಕನು, ಈ ರಂಗನಾಥನು ದೇವದೇವನು, ಅಖಿಲಗುಣಭರಿತನು, ಹೇಳಲಶಕ್ಯವಾದ ಚರಿತ್ರೆಯುಳ್ಳವನು, ಬಹು ಕರುಣಾನಿಧಿಯು, ನಿತ್ಯಾನಂದಮಯನು, ಭಕ್ತ

ಜನ ಸಾಧುಜನಪರಿಪಾಲಕನು, ಯೋಗೀಜನಹೃದಯವಾಸನು, ಜನಾರ್ದನನು, ಜಗವತ್ಪಾವವನು, ಅಪರಿಮಿತವಿಕ್ರಮನು, ರಿಪು ಸಂಹಾರಕನು, ಸಾಮಗಾನಪ್ರೇಮನು, ಮಂಗಳಾತ್ಮಕನಾದ ಪರ ಮಾತ್ಮನು ಈ ಬುಕ್ಕಾದ್ರಿಯಲ್ಲಿ ನಮ್ಮಗಳಂ ಉದ್ಧರಿಸಲೋಸುಗ ಬಂದು ನೆಲಸಿರುವನು.

ಅಲ್ಲದೆ ನಳಿನಲೋಚನನು, ಉತ್ಸಹದೇವನು, ಸಹಸ್ರನಾ ಮವುಳ್ಳವನು, ತ್ರೈಜಗತ್ಪಾವನನು, ಮುಕ್ತಿಕೊಡುವನು,ಕರಿಯು ಕಾಯ್ದವನು, ಸಮುದ್ರದಂತೆ ಗಂಭೀರಗುಣವುಳ್ಳವನು, ಗೋಪಿ ಕಾಸ್ತ್ರೀಯರ ಅಪಾರ ಭಕ್ತಿಗೆ ಒಲಿದು ಮುಕ್ತಿಕೊಟ್ಟ ಮಹನೀ ಯನು, ಗೋವುಗಳನ್ನು ಕಾಯ್ದವನು, ಬೃಂದಾವನದೊಳಗೆ ಗೋಪಾಲಕರಹೆಗಲೇರಿ ಕುಳಿತವನು, ಗೋವರ್ಧನಪರ್ವತವನ್ನು ಎತ್ತಿದ ಧೀರನು, ನರಗೆ ಸಾರಥಿಯಾದವನು, ಪಾಂಡವರ ಪ್ರಾಣ ನಾಥನು, ದ್ರೌಪದಿಯ ಮಾನಕಾಯ್ದವನು, ಭೂಮಿಗೆ ಪತಿಯಾ ದವನು, ಮಂತ್ರಾಧೀನನು, ಯದುಕುಲಲಲಾಮನು, ರಾವಣನಂ ವಧಿಸಿದ ಮಹನೀಯನು, ಅಣುರೇಣುತೃಣಕಾಷ್ಠಪರಿಪೂರ್ಣನು, ವಾಯುಪುತ್ರನಿಗೆ ಬ್ರಹ್ಮಪಟ್ಟ ಕೊಟ್ಟ ಉದಾರಚರಿತನು, ಪಂಚ ಭೂತಾತ್ಮಕವಾದ ಈ ಶರೀರದಲ್ಲಿ ವಾಸಿಸಿರುವವನು, ದಶಾವತಾರ ಗಳನ್ನು ಹೊತ್ತ ಮಹನೀಯನು, ಮೋಕ್ಷದಾಯಕನಾದ ಪರ ಮಾತ್ಮನು, ಅಹಂಕಾರವರ್ಜಿತನು, ದಂಡಧಾರಿಯು, ಉದ್ದಂಡ ನು, ಸಂಸಾರೋತ್ತಾರಕನು, ಅಚ್ಯುತ, ಅನಂತ, ಶ್ರೀರಾಮ, ಪುರುಷೋತ್ತಮ, ನರಹರಿ, ನಾರಾಯಣ, ಮಾಧವ, ಗೋವಿಂದ, ಗರುಡಧ್ವಜ, ಗುಣನಿಧಿ, ದಾಮೋದರ, ಕೇಶವ, ಶ್ರೀ ಕೃಷ್ಣ, ಕಮಲಾಪತಿ, ಯದುಪತಿ, ಸೀತಾಪತಿ, ಶ್ರೀಪತಿ, ವೈಕುಂಠಾಧಿ ಪತಿ, ಚರಾಚರಪತಿ, ಲಕ್ಷ್ಮೀಪತಿ, ಪಾಹಿಮಾಂ ಎಂಬುದಾಗಿ

ಯಾರು ಬೇಡುತ್ತಾರೋ ಅವರುಗಳಿಗೆ ಒಲಿಯಲು ಈ ಬುಕ್ಕಾದ್ರಿ ಯಲ್ಲಿ ರಂಗನಾಥ ನಾಮವಂ ಧರಿಸಿ ನೆಲಸಿರುವ ಪರಮಾತ್ಮನು ಸದ್ಗತಿಯಂ ಈಯುತ್ತಾನಾದಕಾರಣ ಸ್ವಯಂಜ್ಯೋತಿಸ್ವಪ್ರಕಾ ಶನಾದ ರಂಗನಾಥನ ಮಹಿಮೆಯನ್ನು, ಅಲ್ಪಜ್ಞನಾದ ನಾನು ವರ್ಣಿಸಲು ಸಾಧ್ಯವಲ್ಲ. ಸಕೃತ್ ಭಕ್ತನಾದವನ ಸಕಲದುರಿತ ನಿವಾರಣೆಮಾಡಿದ ದಯಾಸಮುದ್ರನು, ಕುಚೇಲನಿಗೆ ಒಲಿದವನು ದೇವಶರ್ಮನೆಂಬ ಬ್ರಾಹ್ಮಣ ಕುಟುಂಬಕ್ಕೆ ಒಲಿದ ಮಹನೀ ಯನು, ಕುಂಬಾರನ, ಭೀಮನ ಆಭರಣಕ್ಕೆ ಮೆಚ್ಚಿದವನು, ಆಕಾಶ ರಾಯನ ಹೆಂಡತಿಗೆ ಕಣ ಹೇಳಿ ಆಕೆಯಮಗಳಿಗೆ ಗಂಡನಾದವನು, ಬಲಿಯ ಬಾಗಿಲನ್ನು ಕಾಯ್ದವನು, ಇಂದ್ರನ ಪಾಪಗಳಂ ನಾಲ್ಕು ಭಾಗಮಾಡಿ ಪರಿಹರಿಸಿದವನು, ನಂದಗೋಪನಿಗೆ ಮಗನೆನಿಸಿ ಕೊಂಡವನು, ಕೃಪಾಸಾಂದ್ರನು, ಬ್ರಹ್ಮಜನಕನು, ದುರ್ಯೋಧ ನನ ಔತಣವನ್ನು ತಿರಸ್ಕರಿಸಿ ವಿದುರನ ಔತಣವನ್ನು ಒಪ್ಪಿದವನು, ಗರುಡವಾಹನನು, ಲಕ್ಷ್ಮೀಕರಾರ್ಚಿತಪಾದಪಲ್ಲವನು, ಪರಮಪಾ ವನನು ದೇವಮಿತ್ರನು, ಬ್ರಹ್ಮಸ್ತುತ್ಯನು, ತುಳಸೀಮಾಲೆಯಂ ಧರಿಸಿದ ಮಹನೀಯನು, ನಾಶರಹಿತನು, ದುಷ್ಟಸಂಹಾರಕನು, ಸದ್ಗುಣಭರಿತನು ಆದ ಈ ಭಗವಂತನು ನಮ್ಮಗಳನ್ನು ಉದ್ಧರಿಸ ಲೋಸುಗ ಈ ಬುಕ್ಕಾದ್ರಿಯಲ್ಲಿ ಬಂದು ನೆಲಸಿರುವ ಮಹನೀಯ ನನ್ನು ಸಹಸ್ರನಾಲಿಗೆಯಿರುವ ಆದಿಶೇಷನಿಂದಲೂ ಹೊಗಳಲು ಅಸಾಧ್ಯವಾಗಿರುವಲ್ಲಿ ಅಲ್ಪಜ್ಞನಾದ ನಾನು ವರ್ಣಿಸಲು ಸಾಧ್ಯ ವೇ ? ಈ ಮಹಾದೇವನನ್ನು ಯಾರಾದರೊಮ್ಮೆ ಹರಿಯೆಂದು ಕೂಗಿದ್ದೇ ಆದರೆ ಸಮಸ್ತ ಪಾಪಗಳಿಂದ ಬಿಡಲ್ಪಟ್ಟವರಾಗಿ ದುಷ್ಟ ವಾದ ಮನಸ್ಸುಗಳಿದ್ದರೂ ಶುದ್ಧಮನಸ್ಕರಾಗುತ್ತಾರೆ.

ಯಾವ ಮನುಷ್ಯನಾದರೂ ನಾಲಿಗೆಯಿಂದ ರಂಗಗುರೋ

ಎಂದು ಕೂಗಿದಮಾತ್ರಕ್ಕೆ ಅಜ್ಞಾನವೆಲ್ಲವೂ ನಾಶವಾಗಿ ನಿರ್ಮಲ ವಾದ ತೇಜಸ್ಸು ಉಂಟಾಗುತ್ತದೆ. ಮತ್ತೇನಾದರೂ ಹರಿಯೆಂದು ಕೂಗಿದ್ದೆ ಆದರೆ ಅಕ್ಷರದ್ವಯದಿಂದ ಗಂಗಾಸ್ನಾನಫಲವೂ, ಗಯಾ ಸೇತು, ಕಾಶಿ, ಕುರುಕ್ಷೇತ್ರ, ಭೂಮಿಯಲ್ಲಿರತಕ್ಕ ಸಮಸ್ತತೀರ್ಥ ಯಾತ್ರಾಫಲವು ತಾನಾಗಿಯೇ ಲಭಿಸುತ್ತದೆ.

ಈ ಪರಮಾತ್ಮನನ್ನು ಅಕ್ಷರದ್ವಯದಿಂದ ಕೂಗಿದಮಾತ್ರ ಕ್ಕೆ ಅಶ್ವಮೇಧಫಲವು, ಯಜ್ಞಫಲವೂ ಉಂಟಾಗುವುದಲ್ಲದೆ, ಪ್ರಾಣವು ಪ್ರಯಾಣಮಾಡುವ ಕಾಲದಲ್ಲಿಯೂ ಮನುಷ್ಯನು ಸಂಸಾರವೆಂಬ ವ್ಯಾಧಿಯಲ್ಲಿರುವ ಕಾಲದಲ್ಲಿಯೂ ಉದ್ಧಾರಮಾ ಡಲು ಬದ್ಧಕಂಕಣನಾಗಿರುವನು.

ಹತ್ತನೆಯರಾಶಿಯನುಸೂರ್ಯನು | ಹತ್ತಿದಾದಿನವೊದ
ಲುದಿನವೇ | ಳುತ್ಸಹದ ಜಾತರೆಯು ನಡೆವುದು ಉತ್ತರಾಶದಲಿ||
ಉತ್ತಮದಗೋದನವುಸಾಸಿರ | ಹತ್ತೆಣಿಕೆಪರಿವಿಡಿದು ದಿನಸೇ |
ರುತ್ತಲಿರ್ಪುದು ಸಾಲುಸಾಲಲಿ ಮತ್ತಮಾಸ್ಥಳದಿ ||

ಸುಂದರಾಂಗೆರು ಸೂರಿಗೆರು ಪೂ | ರ್ಣೇಂದು ಮುಖಿಯ
ರುಗಾನವಿದ್ಯಾ| ನಂದಕರು ಕರಣಿಕರುಸೂತರುವಂದಿಮಾಗಧರು||
ಅಂಧಮೂಕರು ಪ್ರಾಣಿಹಿಂಸಾ | ಬಂಧಕರುಬಲುಚೋದ್ಯಗಾ
ರರು | ಬಂದುಬಂದೊದಗುತ್ತಲಿರ್ಪುದು ಮಂದಿಸಂದೋಹ ||

ಸರಸಿಗಳು, ವಿರಸಿಗಳು, ವಿಷಯಾ | ಕರುಷಿಗಳು ವಾಗ್ಮಿ
ಗಳು ದೇವರ | ದರುಷಿಗಳು ಹರ್ಷಿಗಳುಸುವ್ರತಸತ್ಯಭಾಷಿಗಳು||
ಕರುಣಿಗಳು ತರುಣಿಗಳು ವೈಯ್ಯಾ | ಕರಣಿಗಳು ತಾರ್ತಿಕರುಕವಿ
ತಾ | ಪರಿಣತರು ಧುರಿಣತರು ಸೇರುವರಲ್ಲಿ ಪರಿಣಮಿಸಿ ||

ಅಶನವಸನದಭವನಪಣ್ಣಲ | ಕುಸುಮದಂಗಡಿ ಮಧುರ
ತರದುಪ | ವಸನಮಂದಿರ ಪರಿಪರಿಯಪೊಸಶಾಖಶಾಲೆಗಳು ||

ರಸಭರಿತಪಾಲ್ಮೊಸರನುಂಟಪ| ಮಿಸುಪನವನೀತಂಗಳಾಲಯ| ವೆಸೆದುಶೋಭಿಸುತಿರ್ಪುದಾಗಿರಿವರನಬಳಿಸನಲಿ || ಅಕ್ಕಿತುವರಿಯ ಬೇಳೆಮೊದಲ್ಗಹ| ಮಿಕ್ಕಧಾನ್ಯದರಾಶಿವೀಧಿಯು| ಸಕ್ಕರೆಯು ಹುರಿಗಡಲೆಪುರಿ ಅವಲಕ್ಕಿ ಉತ್ತುತ್ತೆ | ಸುಕ್ಕಿಸಿದ ಖರ್ಜೂರದ್ರಾಕ್ಷಿಯು| ಬಿಕ್ಕಿಬಿರಿದಿಹಕದಲಿದಾಡಿಮ | ಪಿಕ್ಕೆಲದಿಶೋಭಿಸುತಲಿರ್ಪುವುನೋಡಲಲ್ಲಲ್ಲಿ ||

ತಿರುತಿರುಗಿಬಂದರಿಗೆನೀರೆರೆ| ವರವಟಿಗೆಇರುತಿರ್ಪುವಲ್ಲದೆ| ಪರಿಪರಿಯಂದೇಶಗಳವಸ್ತುಗಳಿರದೆಬಂದಿರಲು || ವರಮಹೋತ್ಸವವನ್ನು ನೋಳ್ಪಡೆ| ಪರಿಜನವನೊಡಗೂಡಿ ದೊರೆಗಳು| ಬರುವರಲ್ಲಿಗೆ ಅರುಹಲೆಂತಾಗಿರಿಯಹರಿಮಹಿಮೆ ||

ಆಟಪಾಟವಿನೋದಜೂಜಿನ| ಮಾಟಕಳ್ಳರಕಾಟದನಗಳ| ನೋಟವಪ್ಪಿಗೆಹೂಟಕೊಳ್ಳಲು ಕೂಟಮಾರಾಟ || ನಾಟಕದ ಓಡಾಟಬರುತಿಹ| ನೋಟಕರಕಾಲಾಟಕೂಡಿಹ| ಕೂಟದೋಳ್ ಕೂಗಾಟಮಂಗಳವಾದಮೇಲೋಟ ||

ಇಂತೆಸೆವಸಂಭ್ರಮಗಳೆಲ್ಲವ| ಸ್ವಾಂತದಲಿ ನೆರೆನೋಡಿ ಲಕ್ಷ್ಮೀ| ಕಾಂತನಂಪ್ರಿಯಕಂಡುಮನದಲಿಮುತ್ತೆಮುಂಕೊಂಡು|| ಸಂತಸದಿತೆರಳುವರು ಈಪರಿ| ಸಂತತವುನಡೆವುತ್ತಲಿರ್ಪುದು| ಕಂತುಪಿತನ ಮಹಾತ್ಮೆಯನು ನಾನೆಂತುವರ್ಣಿಸಲಿ ||

ನಳಿನಲೋಚನನಿನ್ನದರುಶನ| ದಳಲಿನಿಂದಲಿಬಂದಮನುಜನು| ಗಳಿತಪಾತಕನಾಗಿ ಸುಲಭದಿಪಡೆದುಸನ್ಮತಿಯ || ದಳಿತಮದಮಾತ್ಸರ್ಯನಾಗುತ| ಗಳಿಸಿಸುಕೃತಂಗಳನುಬೇಗದಿ| ನಳಿನನಾಭನೆನಿನ್ನಪದದಲಿ ಬೆರೆಯುವನುಮುದದಿ ||

ಕಾಲದಲಿಮಳೆಗರೆಯಲಭ್ರವು| ಲೀಲೆಯಲಿಬೆಳೆಫಲಿಸಲುರ್ವಿಯೋಳ್ತೋಲಿಪೋಗಲಿದೇಶದೊಳು ದುರ್ಭಿಕ್ಷವದುತಾನೆ ||

ಬಾಲರಾಗಲಿಇಷ್ಟರಿಗೆ ಶ್ರೀ ಲೋಲರಾಗಲಿ ಬಡವರವದಿರು |
ಬಾಳಲೈನಿರ್ಭಯದೊಳಿಲ್ಲರುವರು ಷಶತಮಿತಿಯು ||

ಮಂಗಳಾತ್ಮಕದುರಿತತಿಮಿರಪ | ತಂಗಭಕ್ತರಸಂಗರುಡ ತು | ರಂಗಭಯಭವಭಂಗನೀಲಾಂಗ || ತುಂಗವಿಕ್ರಮನಂಪಿತ ಕಾ | ಳಿಂಗಮರ್ದನನಿನ್ನಪೂರ್ಣ ಕೃ | ಪಾಂಗದೊಳಗೀಯ ಮ್ಮ ಲೋಕಕೆ ರಂಗಮಂಗಳವ ||.

ಉಪಸಂಹಾರ

ಪರಮಾತ್ಮನು ಈ ಗಿರಿಯಲ್ಲಿ ತನ್ನ ಪಾದವನ್ನು ಊರಿರುವ ಕಾರಣ ಬಹುಕಾಲಪರ್ಯಂತವಾಗಿಯೂ, ಈ ಪಾದಕ್ಕೆ ಅರ್ಚನೆಯು ನಡೆಯುತ್ತಲಿದ್ದು ಬುಕ್ಕರಾಜನು ಇಲ್ಲಿಗೆ ಬಂದನಂತರ ಉತ್ತರೋತ್ತರ ವೃದ್ಧಿ ಹೊಂಚಲೆಂಬ ಉದ್ದೇಶದಿಂದ, ಈ ಪರಮಾತ್ಮನನ್ನು ಉತ್ತರಾಭಿಮುಖವಾಗಿರುವಂತೆ ಮೂರ್ತಿರೂಪಾಗಿ ಪ್ರತಿಷ್ಠೆಮಾಡಿರುತ್ತಾರೆ. ಈ ಕ್ಷೇತ್ರವು ಬೆಂಗಳೂರು, ಮಂಗಳೂರು ಹೈರೋಡಿನ ೮೦ ನೇ ಮೈಲಿಕಲ್ಲಿಗೆ ಸುಮಾರು ಅರ್ಧ ಮೈಲಿ ದಕ್ಷಿಣಭಾಗದಲ್ಲಿ ಕಾಣಿಸುತ್ತದೆ.

ಈ ಭಗವಂತನು ಶ್ರೀದೇವಿ, ಭೂದೇವಿಯರೊಡನೆ ಶೋಭಿತನಾಗಿ ಒಂದೇ ಆಕಾರದಲ್ಲಿ ತೋರುವನಾಗಿಯೂ, ದ್ವಾರಪಾಲಕರಿಂದ ಅಲಂಕೃತನಾಗಿಯೂ, ಗರುಡಧ್ವಜಯುಕ್ತನಾಗಿ, ತಾನು ಬ್ರಹ್ಮಪಟ್ಟ ಕೊಟ್ಟ ಆಂಜನೇಯಸ್ವಾಮಿಯವರಿಂದ ಸೇವೆಯಂ ನೆರವೇರಿಸಿಕೊಳ್ಳುವನೋ ಎಂಬಂತೆ ತೋರಿಸುತ್ತ ದಿವ್ಯಸುಂದರನಾಗಿ ನೆಲಸಿರುವನು.